# ಕೃಷಿ ಸಾಲ ಮನ್ನಾ ಮತ್ತು ಸಾಲ ಪರಿಹಾರ ಯೋಜನೆ, 2008

## 1. ಪ್ರಸ್ತಾವನೆ

1.1. ವಿತ್ತ ಮಂತ್ರಿಯವರು, 2008-2009ನೇ ಸಾಲಿನ ತಮ್ಮ ಆಯವ್ಯಯ ಪತ್ರ ಭಾಷಣದಲ್ಲಿ ರೈತರಿಗಾಗಿ ಸಾಲ ಮನ್ನಾ ಮತ್ತು ಸಾಲ ಪರಿಹಾರ ಯೋಜನೆಯನ್ನು ಘೋಷಿಸಿದರು.

1.2 ಯೋಜನೆಯ ಅನುಷ್ಠಾನಕ್ಕಾಗಿ ಮಾರ್ಗಸೂಚಿಗಳನ್ನು ಕೆಳಗೆ ಕೊಡಲಾಗಿದೆ.

## 2. ವ್ಯಾಪ್ತಿ

2.1. ಮಾರ್ಗಸೂಚಿಗಳಲ್ಲಿ ಸೂಚಿಸಿರುವಂತೆ ಅನುಸೂಚಿತ ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು, ಸಹಕಾರಿ ಸಂಸ್ಥೆಗಳು (ನಗರ ಸಹಕಾರಿ ಬ್ಯಾಂಕುಗಳನ್ನು ಒಳಗೊಂಡು) ಮತ್ತು ಸ್ಥಳೀಯ ಪ್ರದೇಶ ಬ್ಯಾಂಕುಗಳು (ಇನ್ನು ಮುಂದೆ ಇದರಲ್ಲಿ "ಸಾಲ ಕೊಡುವ ಸಂಸ್ಥೆಗಳು" ಎಂದು ಒಟ್ಟಿನಲ್ಲಿ ಉಲ್ಲೇಖಿತ) 'ಅತಿ ಸಣ್ಣ ಮತ್ತು ಸಣ್ಣ ರೈತರಿಗೆ' ಹಾಗೂ 'ಇತರ ರೈತರಿಗೆ' ಕೊಟ್ಟಿದ್ದ ನೇರ ಕೃಷಿ ಸಾಲಗಳಿಗೆ ಯೋಜನೆ ಅನ್ವಯಿಸುತ್ತದೆ.

2.2. ಯೋಜನೆಯು ತಕ್ಷಣದಿಂದಲೇ ಜಾರಿಗೊಳ್ಳುತ್ತದೆ.

## 3. ವ್ಯಾಖ್ಯಾನಗಳು

3.1. 'ನೇರ ಕೃಷಿ ಸಾಲಗಳು' ಎಂದರೆ ಕೃಷಿ ಉದ್ದೇಶಗಳಿಗಾಗಿ ರೈತರಿಗೆ ನೇರವಾಗಿ ಪೂರೈಸಿದ ಅಲ್ಪಾವಧಿ ಉತ್ಪಾದನೆ ಸಾಲಗಳು ಮತ್ತು ಹೂಡಿಕೆ ಸಾಲಗಳು. ವ್ಯಕ್ತಿಗತ ರೈತರ ಗುಂಪುಗಳಿಗೆ (ಉದಾಹರಣೆಗೆ ಸ್ವಸಹಾಯ ಗುಂಪುಗಳು ಮತ್ತು ಜಂಟಿ ಬಾಧ್ಯತೆ ಗುಂಪುಗಳು), ನೇರವಾಗಿ ಪೂರೈಸಿದ ಅಂತಹ ಸಾಲಗಳನ್ನು, ಆ ಗುಂಪಿಗೆ ಸೇರಿದ ಪ್ರತಿಯೊಬ್ಬ ರೈತನಿಗೆ ಕೊಟ್ಟ ಸಾಲದ [illegible] ಮಾಹಿತಿಯನ್ನು ಬ್ಯಾಂಕುಗಳು ಹೊಂದಿದ್ದಲ್ಲಿ, ಒಳಗೊಂಡಿರುತ್ತದೆ.

3.2. 'ಅಲ್ಪಾವಧಿ ಉತ್ಪಾದನೆ ಸಾಲ' ಎಂದರೆ 18 ತಿಂಗಳುಗಳೊಳಗೆ ಮರುಪಾವತಿಸಬೇಕಾದ, ಬೆಳೆಗಳನ್ನು ಬೆಳೆಯಲು ಕೊಟ್ಟ ಸಾಲ. ಸಾಂಪ್ರದಾಯಿಕ ಮತ್ತು ಅಸಾಂಪ್ರದಾಯಿಕ ತೋಟಗಳು ಹಾಗೂ ತೋಟಗಾರಿಕೆಗಾಗಿ, 1 ಲಕ್ಷ ರೂ.ಗಳನ್ನು ಮೀರದ, ದುಡಿಮೆ ಬಂಡವಾಳ ಸಾಲವನ್ನೂ ಇದು ಒಳಗೊಳ್ಳುತ್ತದೆ.

3.3. 'ಹೂಡಿಕೆ ಸಾಲ' ಎಂದರೆ

(ಅ) ವೃದ್ಧಿಗೊಳ್ಳುವ ಸ್ವತ್ತುಗಳ ಮರುಪೂರೈಕೆ ಮತ್ತು ಪಾಲನೆಗೆ ಸಂಬಂಧಿಸಿದ ಬಾಬ್ತುಗಳನ್ನು ಪೂರೈಸುವುದಕ್ಕಾಗಿ ನೇರ ಕೃಷಿ ಚಟುವಟಿಕೆಗಳಿಗಾಗಿ ಕೊಟ್ಟ ಹಾಗೂ ಭೂಮಿಯಿಂದ ಉತ್ಪನ್ನ ಹೆಚ್ಚಿಸಲು ರೂಪಿಸಿದ ಬಂಡವಾಳ ಹೂಡಿಕೆ, ಉದಾ. ಪಂಪುಗಳನ್ನು

ಅಳವಡಿಸುವಿಕೆ, ಹೊಸ ಬಾವಿಗಳನ್ನು ತೋಡುವಿಕೆ, ಪಂಪ್ ಸೆಟ್ಟುಗಳ ಸ್ಥಾಪನೆ, ಟ್ರ್ಯಾಕ್ಟರ್/ಜೋಡೆತ್ತುಗಳ ಖರೀದಿ, ಭೂ ಅಭಿವೃದ್ಧಿ ಮತ್ತು ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ತೋಟಗಳು ಹಾಗೂ ತೋಟಗಾರಿಕೆಗಾಗಿ ಅವಧಿ ಸಾಲಕ್ಕಾಗಿ ಹೂಡಿಕೆ ಮತ್ತು

(ಆ) ಕೃಷಿ ಸಂಬಂಧಿತ ಚಟುವಟಿಕೆಗಳಿಗೆ ಸ್ವತ್ತುಗಳನ್ನು ಹೊಂದುವುದಕ್ಕಾಗಿ ಅಂದರೆ ಹೈನುಗಾರಿಕೆ, ಕುಕ್ಕುಟ ಸಾಕಣೆ, ಆಡುಗಳ ಸಾಕಣೆ, ಕುರಿ ಸಂಗೋಪನೆ, ಹಂದಿ ಸಾಕಣೆ, ಮೀನುಗಾರಿಕೆ, ಜೇನು ನೊಣ ಸಾಕಣೆ, ಹಸಿರು ಮನೆಗಳು ಮತ್ತು ಕೃಷಿ ಅವಧಿಕ್ಕಾಗಿ ಹೂಡಿಕೆ ಮತ್ತು

3.4. 'ಸಹಕಾರಿ ಪತ್ತು ಸಂಸ್ಥೆ' ಎಂದರೆ

i) ರೈತರಿಗೆ ಅಲ್ಪಾವಧಿ ಬೆಳೆ ಸಾಲಗಳನ್ನು ಒದಗಿಸುತ್ತದೆ ಮತ್ತು ಕೇಂದ್ರ ಸರ್ಕಾರದಿಂದ ಬಡ್ಡಿ ಸಹಾಯಧನಕ್ಕೆ (Interest Subvention) ಅರ್ಹವಾಗಿರುವ; ಅಥವಾ

ii) ಆರ್.ಬಿ.ಐ. ಅಥವಾ ನಬಾರ್ಡ್ ನಿಬಂಧಿತ ಅಥವಾ ಉದ್ದೇಶಿಸಿರುವ ಬ್ಯಾಂಕ್ ವ್ಯವಹಾರ ಚಟುವಟಿಕೆಗಳಲ್ಲಿ ತೊಡಗಿರುವ; ಅಥವಾ

iii) ಒಂದು ರಾಜ್ಯ ಅಥವಾ ಕೇಂದ್ರ ಪ್ರದೇಶದಲ್ಲಿ ಅಲ್ಪಾವಧಿ ಸಹಕಾರಿ ಪತ್ತು ರಚನೆ ಅಥವಾ ದೀರ್ಘಾವಧಿ ಸಹಕಾರಿ ಪತ್ತು ರಚನೆಯ ಭಾಗವಾಗಿರುವ ಸಹಕಾರಿ ಸಂಘ.

3.5. 'ಅತಿ ಸಣ್ಣ ರೈತ' ಎಂದರೆ 1 ಹೆಕ್ಟೇರು (2.5 ಎಕರೆ)ಗಳವರೆಗೆ ಕೃಷಿ ಭೂಮಿ (ಮಾಲೀಕ ಅಥವಾ ಗೇಣಿದಾರ ಅಥವಾ ಪಾಲು ಬೆಳೆಗಾರನಾಗಿ) ಬೇಸಾಯ ಮಾಡುತ್ತಿರುವ ರೈತ.

3.6. 'ಸಣ್ಣ ರೈತ' ಎಂದರೆ 1 ಹೆಕ್ಟೇರಿಗಿಂತ ಹೆಚ್ಚು ಮತ್ತು 2 ಹೆಕ್ಟೇರು (5 ಎಕರೆ)ಗಳವರೆಗೆ ಕೃಷಿ ಭೂಮಿ (ಮಾಲೀಕ ಅಥವಾ ಗೇಣಿದಾರ ಅಥವಾ ಪಾಲು ಬೆಳೆಗಾರನಾಗಿ) ಬೇಸಾಯ ಮಾಡುತ್ತಿರುವ ರೈತ.

3.7. 'ಇತರ ರೈತ' ಎಂದರೆ 2 ಹೆಕ್ಟೇರುಗಳಿಗಿಂತ ಹೆಚ್ಚು (5 ಎಕರೆಗಳಿಗಿಂತ ಹೆಚ್ಚು) ಕೃಷಿ ಭೂಮಿ (ಮಾಲೀಕ ಅಥವಾ ಗೇಣಿದಾರ ಅಥವಾ ಪಾಲು ಬೆಳೆಗಾರನಾಗಿ) ಬೇಸಾಯ ಮಾಡುತ್ತಿರುವ ರೈತ.

**ವಿವರಣೆ**

1. ಮಾಲೀಕತ್ವ ಅಥವಾ ಹಿಡುವಳಿದಾರಿಕೆಯಲ್ಲಿ ನಿರ್ಧರಿಸುವಾಗ ಜಂಟಿ ಹಿಡುವಳಿಗಳನ್ನು ಲೆಕ್ಕಿಸದೆ, ಸಾಲ ಮಂಜೂರು ಮಾಡುವ ಸಮಯದಲ್ಲಿ ಒಂದಾಗಿ

ಅಥವಾ ಜಂಟಿ ಹೊಂದಿರುವವನಾಗಿ (ಮಾಲೀಕ-ರೈತನ ಸ್ವರೂಪದಲ್ಲಿ) ಅಥವಾ (ಗೇಣಿದಾರ ಅಥವಾ ಪಾಲು ಬೆಳೆಗಾರನಾಗಿ) ಕೃಷಿ ಮಾಡುವ ಭೂಮಿಯ ಒಟ್ಟು ವಿಸ್ತೀರ್ಣವನ್ನು, ರೈತನ ಮಾಲೀಕತ್ವದ ಭೂಮಿಯ ಒಟ್ಟು ವಿಸ್ತೀರ್ಣವನ್ನು ಆಧರಿಸಿ ಯೋಜನೆಯ ದೃಷ್ಟಿ ಮೇಲೆ ತಿಳಿಸಿದ ಭೂಮಿ ಹೊಂದಿರುವಿಕೆಗನುಗುಣವಾಗಿ ಅರ್ಹ ರೈತರ ವರ್ಗೀಕರಣ ಇರುತ್ತದೆ.

2. ಸಾಲ ಹೊಂದಿರುವ ಭೂಮಿಯನ್ನು ಒಟ್ಟುಗೂಡಿಸಿ ಒಬ್ಬರಿಗಿಂತ ಹೆಚ್ಚು ರೈತರು ಸಾಲ ಪಡೆಯುವ ಸಂದರ್ಭದಲ್ಲಿ, 'ಅತಿ ಸಣ್ಣ ರೈತ' ಅಥವಾ 'ಸಣ್ಣ ರೈತ' ಅಥವಾ 'ಇತರ ರೈತ'ನಾಗಿ ಆ ಒಟ್ಟುಗೂಡುವಿಕೆಯ ಎಲ್ಲ ರೈತರ ವರ್ಗೀಕರಣದ ಉದ್ದೇಶಕ್ಕಾಗಿ, ಒಟ್ಟುಗೂಡುವಿಕೆಯಲ್ಲಿ ಹೊಂದಿರುವ ಭೂಮಿಯ ಅತಿ ದೊಡ್ಡದರ ಗಾತ್ರ ಆಧಾರವಾಗಿರುತ್ತದೆ.

3. ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ ಹೂಡಿಕೆ ಮತ್ತು ಪಡೆದಿದ್ದು, ಅಸಲು ಸಾಲ ಮೊತ್ತ 50,000 ರು. ಮೀರದಂತೆ ಪಡೆದಿರುವ ರೈತರನ್ನು 'ಸಣ್ಣ ಮತ್ತು ಅತಿ ಸಣ್ಣ ರೈತ' ಎಂದು ವರ್ಗೀಕರಿಸಲಾಗುವುದು ಮತ್ತು ಅಸಲು ಮೊತ್ತ 50,000 ರು. ಮೀರಿದ್ದಲ್ಲಿ, 'ಇತರ ರೈತ' ಎಂದು ವರ್ಗೀಕರಿಸಲಾಗುವುದು. ಮೇಲೆ ತಿಳಿಸಿದ ಎರಡೂ ಸಂದರ್ಭಗಳಲ್ಲಿ ರೈತರು ಹೊಂದಿರುವ ಭೂಮಿಯ ಗಾತ್ರವನ್ನು ಪರಿಗಣಿಸಲಾಗುವುದಿಲ್ಲ.

4. ಈ ಮಾರ್ಗಸೂಚಿಗಳಿಗೆ ಒಳಪಟ್ಟು ಕಿಸಾನ್ ಕ್ರೆಡಿಟ್ ಕಾರ್ಡಿನಲ್ಲಿ ಪಡೆದ ನೇರ ಕೃಷಿ ಸಾಲಕ್ಕೂ ಕೂಡ ಈ ಯೋಜನೆಯು ಅನ್ವಯಿಸುತ್ತದೆ.

5. ಒಂದು ಅಲ್ಪಾವಧಿ ಉತ್ಪಾದನೆ ಸಾಲ ಮತ್ತು ಬೆಳೆಸಾಲ ಪಡೆದ ಹೂಡಿಕೆ ಸಾಲವನ್ನು ಎರಡು ನಿರ್ದಿಷ್ಟ ಸಾಲಗಳೆಂದು ಪರಿಗಣಿಸಬೇಕು ಹಾಗೂ ಎರಡು ಸಾಲಗಳಿಗೆ ಯೋಜನೆ ಪ್ರತ್ಯೇಕವಾಗಿ ಅನ್ವಯಿಸುತ್ತದೆ. ಅಂತೆಯೇ, ಎರಡು ಪ್ರತ್ಯೇಕ ಉದ್ದೇಶಗಳಿಗಾಗಿ ಎರಡು ಹೂಡಿಕೆ ಸಾಲಗಳನ್ನು ಪಡೆದಿರುವ ಸಂದರ್ಭದಲ್ಲಿ, ಎರಡೂ ಸಾಲಗಳನ್ನು ಎರಡು ನಿರ್ದಿಷ್ಟ ಸಾಲಗಳೆಂದು ಪರಿಗಣಿಸಬೇಕು ಮತ್ತು ಯೋಜನೆ ಎರಡೂ ಸಾಲಗಳಿಗೆ ಪ್ರತ್ಯೇಕವಾಗಿ ಅನ್ವಯಿಸಬೇಕು.

## 4. ಅರ್ಹ ಮೊತ್ತ

4.1 ಸಂದರ್ಭಾನುಸಾರವಾಗಿ, ಸಾಲ ಮನ್ನಾ ಅಥವಾ ಸಾಲ ಪರಿಹಾರಕ್ಕಾಗಿ ಅರ್ಹ ಮೊತ್ತ (ಇದರಲ್ಲಿ ಇನ್ನುಮುಂದೆ 'ಅರ್ಹ ಮೊತ್ತ' ಎಂದು ಉಲ್ಲೇಖಿತ), ಇದನ್ನು ಒಳಪಟ್ಟಿರುತ್ತದೆ :

(ಅ) ಅಲ್ಪಾವಧಿ ಉತ್ಪಾದನೆ ಸಾಲವಾದಲ್ಲಿ, ಅಂತಹ ಸಾಲದ ಮೊತ್ತ (ಅನ್ವಯಿಸುವ ಬಡ್ಡಿಯೊಂದಿಗೆ):

i) ಮಾರ್ಚ್ 31, 2007ರವರೆಗೆ ವಿತರಿಸಲ್ಪಟ್ಟ ಮತ್ತು ಡಿಸೆಂಬರ್ 31, 2007ರಂದು ಸುಸ್ತಿಯಾಗಿ, ಹಾಗೂ ಫೆಬ್ರವರಿ 29, 2008ರ ತನಕ ಪಾವತಿಸದೆ ಉಳಿದಿರುವುದು :

ii) ಕೇಂದ್ರ ಸರ್ಕಾರ ಘೋಷಿಸಿದ ವಿಶೇಷ ಪ್ಯಾಕೇಜ್‌ಗಳ ಮೂಲಕ 2004ರಲ್ಲಿ ಮತ್ತು 2006ರಲ್ಲಿ ಬ್ಯಾಂಕುಗಳಿಂದ ಪುನಾರಚಿತ ಹಾಗೂ ಪುನಾರೂಪಿತ ಸಾಲಗಳು, ಸುಸ್ತಿಯಾಗಿರುವುದು ಅಥವಾ ಸುಸ್ತಿಯಾಗದೆ ಇರುವುದು; ಹಾಗೂ

iii) ನೈಸರ್ಗಿಕ ಪ್ರಕೋಪಗಳಿಂದಾಗಿ ಅನ್ವಯಿಸುವ ಆರ್.ಬಿ.ಐ. ಮಾರ್ಗಸೂಚಿಗಳ ಪ್ರಕಾರ ಮಾರ್ಚ್ 31, 2007ರ ತನಕ ಪುನಾರಚಿತ ಅಥವಾ ಪುನಾರೂಪಿತ ಸಾಲಗಳು, ಸುಸ್ತಿಯಾಗಿರುವುದು ಅಥವಾ ಸುಸ್ತಿಯಾಗದೆ ಇರುವುದು.

(ಬಿ) ಹೂಡಿಕೆ ಸಾಲದಲ್ಲಿ, ಸುಸ್ತಿಯಾಗಿರುವ ಕಂತುಗಳು (ಅಂತಹ ಕಂತುಗಳ ಮೇಲೆ ಅನ್ವಯಿಸುವ ಬಡ್ಡಿಸಹಿತ) ಈ ಕೆಳಕಂಡ ಸಂದರ್ಭದಲ್ಲಿ:

i) ಮಾರ್ಚ್ 31, 2007ರ ತನಕ ವಿತರಣೆ ಮಾಡಿರುವುದು ಮತ್ತು ಡಿಸೆಂಬರ್ 31, 2007ರಂದು ಸುಸ್ತಿಯಾಗಿದ್ದು ಹಾಗೂ ಫೆಬ್ರವರಿ 29, 2008ರ ತನಕ ಪಾವತಿಸದೆ ಉಳಿದಿರುವುದು;

ii) ಕೇಂದ್ರ ಸರ್ಕಾರ ಘೋಷಿಸಿದ ವಿಶೇಷ ಪ್ಯಾಕೇಜ್‌ಗಳ ಮೂಲಕ 2004ರಲ್ಲಿ ಮತ್ತು 2006ರಲ್ಲಿ ಬ್ಯಾಂಕುಗಳು ಪುನಾರಚಿಸಿದ ಹಾಗೂ ಪುನಾರೂಪಿಸಿದ ಸಾಲಗಳು; ಹಾಗೂ

iii) ನೈಸರ್ಗಿಕ ಪ್ರಕೋಪಗಳಿಂದಾಗಿ, ಆರ್.ಬಿ.ಐ. ಮಾರ್ಗಸೂಚಿಗಳ ಪ್ರಕಾರ ಮಾರ್ಚ್ 31, 2007ರ ವರೆಗೆ ಪುನಾರಚಿಸಿದ ಹಾಗೂ ಪುನಾರೂಪಿಸಿದ ಸಾಲಗಳು.

**ವಿವರಣೆ :** ಮಾರ್ಚ್ 31, 2007ರ ತನಕ ವಿತರಣೆಯಾದ ಹೂಡಿಕೆ ಸಾಲವು ಅದು ಪೂರ್ತಿ ಸುಸ್ತಿಯಾಗಿದ್ದು ಮತ್ತು ಬಾಕಿ ಉಳಿದ ಖಾತೆ ಎಂದು ವರ್ಗೀಕರಿಸಿರುವ ಸಂದರ್ಭದಲ್ಲಿ, ಡಿಸೆಂಬರ್ 31, 2007ರಂದು ಸುಸ್ತಿಯಾಗಿದ್ದ ಕಂತುಗಳು ಮಾತ್ರ ಅರ್ಹ ಮೊತ್ತವಾಗಿರುತ್ತದೆ.

4.2. ಅರ್ಹ ಮೊತ್ತದಲ್ಲಿ ಈ ಕೆಳಗೆ ತಿಳಿಸಿದ ಸಾಲಗಳನ್ನು ಸೇರಿಸಲಾಗದು;

(ಎ) ನಿಂತಿರುವ ಬೆಳೆ ಅಥವಾ ಕೃಷಿ ಉತ್ಪನ್ನದ ಅಡವು ಅಥವಾ ಅಡಮಾನದ ಮುಂಗಡಗಳು; ಮತ್ತು

(ಬಿ) ಕಾರ್ಪೊರೇಟ್ ಸಂಸ್ಥೆಗಳು, ಪಾಲುದಾರಿಕೆ ಸಂಸ್ಥೆಗಳು, ಸಹಕಾರಿ ಮತ್ತು ಸಂಸ್ಥೆಗಳಲ್ಲದ ಸಂಘಗಳಿಗೆ (3ನೇ ಸ್ಥಾನದಲ್ಲಿ ಉಲ್ಲೇಖಿತ) ಹಾಗೂ ಯಾವುದೇ ಆ ತರಹ ಸಂಸ್ಥೆಗೆ ಕೊಟ್ಟ ಕೃಷಿ ಸಾಲಗಳು.

4.1 ಯಾವುದೇ ಸಾಲ ಕೊಡುವ ಸನ್ನಿವೇಶವು ಮಾರ್ಚ್ 31, 1997ಕ್ಕೆ ಮುನ್ನ ಆಗಿರುವ ಯಾವುದೇ ಸಾಲಕ್ಕೆ ಈ ಯೋಜನೆಯು ಅನ್ವಯಿಸುವುದಿಲ್ಲ.

5. ಸಾಲ ಮನ್ನಾ

5.1. ಸಣ್ಣ ಅಥವಾ ಅತಿ ಸಣ್ಣ ರೈತರಿಗೆ ಪೂರ್ಣ 'ಅರ್ಹ ಮೊತ್ತವನ್ನು' ಮನ್ನಾ ಮಾಡಬೇಕು.

6. ಸಾಲ ಪರಿಹಾರ

6.1. 'ಇತರ ರೈತರಿಗೆ' ಒಂದು ಸಲ ಇತ್ಯರ್ಥಗೊಳಿಸುವ (ಒ.ಟಿ.ಎಸ್) ಯೋಜನೆ ಇದ್ದು, ಇದರ ಪ್ರಕಾರ 'ಅರ್ಹ ಮೊತ್ತ'ದ ಶೇಕಡ 75ರಷ್ಟು ಬಿಲ್ಲನ್ನು ರೈತ ಪಾವತಿಸುವ ಷರತ್ತಿಗೆ ಒಳಪಟ್ಟು 'ಅರ್ಹ ಮೊತ್ತ'ದ ಶೇಕಡ 25ರಷ್ಟು ಕಡಿತವನ್ನು ರೈತನಿಗೆ ಕೊಡಲಾಗುತ್ತದೆ.

ಹೀಗಿದ್ದರೂ **1ನೇ ಅನುಸೂಚಿಯಲ್ಲಿ** ಪಟ್ಟಿ ಮಾಡಿರುವ ಕಂದಾಯ ಜಿಲ್ಲೆಗಳಲ್ಲಿ, ಅರ್ಹ ಮೊತ್ತದ ಬಿಲ್ಲನ್ನು ರೈತ ಪಾವತಿಸುವ ಷರತ್ತಿಗೆ ಒಳಪಟ್ಟು, 'ಅರ್ಹ ಮೊತ್ತ'ದ ಶೇಕಡ 25ರಷ್ಟು ಅಥವಾ 20,000 ರೂ.ಗಳ ಒ.ಟಿ.ಎಸ್. ಕಡಿತ (ಯಾವುದು ಹೆಚ್ಚೋ) ಅದನ್ನು 'ಇತರ ರೈತರಿಗೆ' ಕೊಡಲಾಗುವುದು.

7. ಅನುಷ್ಠಾನ

7.1 ಈ ಯೋಜನೆಯ ಪ್ರಕಾರ ಸಾಲ ಮನ್ನಾಕ್ಕಾಗಿ ಅರ್ಹರಾಗಿರುವ 'ಸಣ್ಣ ಮತ್ತು ಅತಿ ಸಣ್ಣ ರೈತರನ್ನು' ಒಳಗೊಂಡ ಒಂದು, ಮತ್ತು ಸಾಲ ಪರಿಹಾರಕ್ಕಾಗಿ ಅರ್ಹರಾಗಿರುವ 'ಇತರ ರೈತರನ್ನು' ಒಳಗೊಂಡ ಮತ್ತೊಂದು, ಪಟ್ಟಿಗಳನ್ನು ಈ ಯೋಜನೆಯ ಪ್ರಕಾರ ಅನುಸೂಚಿತ ವಾಣಿಜ್ಯ ಬ್ಯಾಂಕ್, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್, ಸಹಕಾರಿ ಮತ್ತು ನಗರ, ಪಟ್ಟಣ ಸಹಕಾರಿ ಬ್ಯಾಂಕ್ ಹಾಗೂ ಸ್ಥಳೀಯ ಪ್ರದೇಶ ಬ್ಯಾಂಕಿನ ಪ್ರತಿಯೊಂದು ಶಾಖೆ ಸಿದ್ಧಪಡಿಸಬೇಕು. ಈ ಪಟ್ಟಿಗಳು ಪ್ರತಿಯೊಬ್ಬ ರೈತನು ಹೊಂದಿರುವ ಭೂಮಿ, ಅರ್ಹ ಮೊತ್ತ ಮತ್ತು ನೀಡಲಾಗುವ ಸಾಲ ಮನ್ನಾ ಅಥವಾ ಸಾಲ ಪರಿಹಾರದ ಮೊತ್ತದ ವಿವರಗಳನ್ನು ಒಳಗೊಂಡಿರಬೇಕು. ಜೂನ್ 30, 2008ರಂದು ಅಥವಾ ಅದಕ್ಕೂ ಮುನ್ನ ಬ್ಯಾಂಕ್/ಸಂಘದ ಶಾಖೆಯ ಸೂಚನಾ ಫಲಕದ ಮೇಲೆ ಈ ಪಟ್ಟಿಗಳನ್ನು ಪ್ರದರ್ಶಿಸಬೇಕು.

7.2. ಅರ್ಹ ಮೊತ್ತವನ್ನು ಮನ್ನಾ ಮಾಡಲ್ಪಟ್ಟಾಗ 'ಸಣ್ಣ ರೈತ' ಅಥವಾ 'ಅತಿ ಸಣ್ಣ ರೈತನು' ಹೊಸ ಕೃಷಿ ಸಾಲಗಳಿಗೆ ಅರ್ಹನಾಗುತ್ತಾನೆ.

7.3. ಒ.ಟಿ.ಎಸ್. ಪರಿಹಾರಕ್ಕೆ ಅರ್ಹನಾಗಿರುವ 'ಇತರ ರೈತ' ತನ್ನ ಸಾಲವನ್ನು (ಅಂದರೆ ಒ.ಟಿ.ಎಸ್. ಪರಿಹಾರದ ಮೊತ್ತ ಕಳೆದಾಗಿನ ಅರ್ಹ ಮೊತ್ತ) ಮೂರಕ್ಕಿಂತ ಹೆಚ್ಚಿಲ್ಲದ ಕಂತುಗಳಲ್ಲಿ ಪಾವತಿಸಲು ಒಪ್ಪಿ ಮುಚ್ಚಳಿಕೆ ಪತ್ರ ಬರೆದುಕೊಡಬೇಕು ಮತ್ತು ಪ್ರಥಮ ಎರಡು ಕಂತುಗಳು ಅವನ ಪಾಲಿನ ಮೂರನೇ ಒಂದರಷ್ಟಕ್ಕಿಂತ ಕಡಿಮೆಯಲ್ಲದ ಮೊತ್ತದ್ದಾಗಿರಬೇಕು. ಮೂರು ಕಂತುಗಳ ಸಂದಾಯದ ಕೊನೆಯ ದಿನಾಂಕಗಳು ಸೆಪ್ಟೆಂಬರ್ 30, 2008, ಮಾರ್ಚ್ 31, 2009 ಹಾಗೂ ಜೂನ್ 30, 2009 ಆಗಿರುತ್ತವೆ.

7.4. ಈ ಮುಚ್ಚಳಿಕೆ ಪತ್ರವು ಅನುಬಂಧ / ನಮೂನೆ ನಿಗದಿಪಡಿಸಿದ ನಮೂನೆಯಲ್ಲಿರಬೇಕು.

7.5. ರೈತ ತನ್ನ ಪಾಲನ್ನು ಪೂರ್ತಿಯಾಗಿ ಪಾವತಿಸಿದ ನಂತರ ಒ.ಟಿ.ಎಸ್. ಪರಿಹಾರದ ಮೊತ್ತವನ್ನು (ಅಂದರೆ ಕೇಂದ್ರ ಸರ್ಕಾರದ ಪಾಲನ್ನು) 'ಇತರ ರೈತ'ನ ಖಾತೆಗೆ ಜಮಾ ಮಾಡಲಾಗುವುದು.

7.6. 'ಇತರ ರೈತ'ನು ಅಲ್ಪಾವಧಿ ಉತ್ಪಾದನೆ ಸಾಲದ ಸಂದರ್ಭದಲ್ಲಿ, ತನ್ನ ಪಾಲಿನ ಮೊಬಲಗು ಒಪ್ಪಿದಷ್ಟನ್ನು ಪಾವತಿ ಮಾಡಿದಾಗ ಹೊಸ ಅಲ್ಪಾವಧಿ ಉತ್ಪಾದನಾ ಸಾಲಕ್ಕೆ ಅರ್ಹನಾಗುತ್ತಾನೆ.

7.7. 'ಇತರ ರೈತ'ನು ನೇರ ಕೃಷಿ ಚಟುವಟಿಕೆಗಳು ಅಥವಾ ಸಂಬಂಧಿತ ಚಟುವಟಿಕೆಗಳಿಗಾಗಿ ಹೂಡಿಕೆ ಸಾಲದ ತನ್ನ ಪಾಲನ್ನು ಪೂರ್ತಿಯಾಗಿ ಪಾವತಿಸಿದಾಗ ಹೊಸ ಹೂಡಿಕೆ ಸಾಲಕ್ಕೆ ಅರ್ಹನಾಗುತ್ತಾನೆ.

7.8. ಅನುಸೂಚಿತ ವಾಣಿಜ್ಯ ಬ್ಯಾಂಕುಗಳು, ಪಟ್ಟಣ ಸಹಕಾರಿ ಬ್ಯಾಂಕುಗಳು ಮತ್ತು ಸ್ಥಳೀಯ ಪ್ರದೇಶ ಬ್ಯಾಂಕುಗಳಿಗೆ ಯೋಜನೆಯ ಅನುಷ್ಠಾನಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ನೋಡಲ್ ಸಂಸ್ಥೆಯಾಗಿರುತ್ತದೆ (Nodal Agency). ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಹಾಗೂ ಸಹಕಾರಿ ಪತ್ತಿನ ಸಂಸ್ಥೆಗಳಿಗೆ ನಬಾರ್ಡ್ ನೋಡಲ್ ಸಂಸ್ಥೆಯಾಗಿರುತ್ತದೆ (Nodal Agency).

## 8. ಬಡ್ಡಿ ಮತ್ತು ಇತರ ವೆಚ್ಚಗಳು

8.1. ಫೆಬ್ರವರಿ 29, 2008ರ ಬಳಿಕ ಯಾವುದೇ ಅವಧಿಗಾಗಿ 'ಅರ್ಹ ಮೊತ್ತ'ದ ಮೇಲೆ ಸಾಲ ಕೊಡುವ ಸಂಸ್ಥೆಗಳು ಯಾವುದೇ ಬಡ್ಡಿ ವಿಧಿಸಬಾರದು. ಹಾಗಿದ್ದರೂ, 'ಇತರ ರೈತ' ಜೂನ್ 30, 2009ರಂದು ಅಥವಾ ಮುನ್ನ ಅರ್ಹ ಮೊತ್ತದ ತನ್ನ ಪಾಲನ್ನು ಪಾವತಿಸಲು ತಪ್ಪಿ, ಒ.ಟಿ.ಎಸ್. ಪರಿಹಾರಕ್ಕೆ ಅನರ್ಹಗೊಳ್ಳುವ ಸಂದರ್ಭದಲ್ಲಿ ಜೂನ್ 30, 2009ರ ಬಳಿಕದ ಅವಧಿಗಾಗಿ ಬ್ಯಾಂಕು ಬಡ್ಡಿಯನ್ನು ವಿಧಿಸಬಹುದಾಗಿದೆ.

8.2. 31.12.2007ರ ಬಳಿಕ ಸುಸ್ತಿಯಾಗುವ ಹೂಡಿಕೆ ಪತ್ತಿನ ಕಂತುಗಳನ್ನು ಸಾಲ ಕೊಡುವ ಸಂಸ್ಥೆಗಳು ಅನ್ವಯಿಸುವ ಬಡ್ಡಿಯೊಂದಿಗೆ ವಸೂಲು ಮಾಡಬೇಕು. ಹಾಗಿದ್ದರೂ, ಸಂಬಂಧಿತ ಸಾಲ ಕೊಡುವ ಸಂಸ್ಥೆಯು, ತನ್ನ ನೀತಿಯ ಅನುಸಾರ, ಸೂಕ್ತ ಸಂದರ್ಭಗಳಲ್ಲಿ ಈ ಕಂತುಗಳನ್ನು ಪುನಾರೂಪಿಸಬಹುದಾಗಿದೆ.

8.3. ಈ ಯೋಜನೆಯಲ್ಲಿರುವ ಯಾವುದನ್ನೂ ಪರಿಗಣಿಸದೆ, ಈ ಯೋಜನೆಯ ಪ್ರಕಾರ ಕೇಂದ್ರ ಸರ್ಕಾರದಿಂದ ಭರ್ತಿ ಮಾಡಿ ಕೊಡುವ (Reimbursement) ಸಾಲ ಕೊಡುವ ಸಂಸ್ಥೆ ಪಡೆಯಬಹುದಾದ ಬಡ್ಡಿಯ ಮೊತ್ತ, ಯಾವ ಸಂದರ್ಭದಲ್ಲೂ, ಸಾಲದ ಅಸಲು ಮೊತ್ತವನ್ನು ಮೀರಬಾರದು.

8.4. ಸಾಲ ಕೊಡುವ ಸಂಸ್ಥೆಗಳು, ರೈತ ಅಥವಾ ಕೇಂದ್ರ ಸರ್ಕಾರದಿಂದ ಪಡೆಯಬಹುದಾದ ಬಡ್ಡಿ ಮತ್ತು ಇತರ ಖರ್ಚುಗಳ ಬಗೆಗಿನ ತಿಳುವಳಿಕೆಗಳನ್ನು ಒಳಗೊಂಡು ಎಲ್ಲಾ ಸಾಂದರ್ಭಿಕ ಮತ್ತು ತತ್ಸಂಬಂಧಿತ ಸಂಗತಿಗಳ ಬಗೆಗೆ ಸಾಲ ಕೊಡುವ ಸಂಸ್ಥೆಗಳಿಗೆ ಪತ್ರ ಮುಖಾಂತರ ಪೂರಕ ತಿಳುವಳಿಕೆಗಳನ್ನು ಹೊರಡಿಸುತ್ತದೆ.

9. **ಸಾಲ ಮನ್ನಾ ಅಥವಾ ಸಾಲ ಪರಿಹಾರದ ದೃಢೀಕರಣ ಪತ್ರ**

9.1. ಸಣ್ಣ ಮತ್ತು ಅತಿ ಸಣ್ಣ ರೈತರ ಅರ್ಹ ಮೊತ್ತವನ್ನು ಮನ್ನಾ ಮಾಡಿದಾಗ, ಸಾಲವನ್ನು ಮನ್ನಾ ಮಾಡಲಾಗಿದೆ ಎಂದು ಮತ್ತು ಮನ್ನಾ ಮಾಡಿರುವ ಅರ್ಹ ಮೊತ್ತವನ್ನು ನಿರ್ದಿಷ್ಟವಾಗಿ ನಮೂದಿಸಿ ಸಾಲ ಕೊಡುವ ಸಂಸ್ಥೆ ದೃಢೀಕರಣ ಪತ್ರ ಕೊಡಬೇಕು.

9.2. 'ಇತರ ರೈತರಿಗೆ' ಒ.ಟಿ.ಎಸ್. ಪರಿಹಾರ ನೀಡಲ್ಪಟ್ಟಾಗ, ಸಾಲ ಕೊಡುವ ಸಂಸ್ಥೆಯು ಸಮಾಧಾನಕ್ಕೆ ಸಾಲದ ಖಾತೆಯನ್ನು ಇತ್ಯರ್ಥ ಮಾಡಲಾಗಿದೆ ಎಂದು ಮತ್ತು ಅರ್ಹ ಮೊತ್ತ, ರೈತ ತನ್ನ ಪಾಲನ್ನು ಪಾವತಿಸಿದ ಮೊತ್ತ ಹಾಗೂ ಒ.ಟಿ.ಎಸ್. ಪರಿಹಾರದ ಮೊತ್ತವನ್ನು ನಿರ್ದಿಷ್ಟವಾಗಿ ನಮೂದಿಸಿ ದೃಢೀಕರಣ ಪತ್ರವನ್ನು ಕೊಡಬೇಕು.

9.3. ದೃಢೀಕರಣ ಪತ್ರ ಆರ್.ಬಿ.ಐ./ನಬಾರ್ಡ್ ಗೊತ್ತುಪಡಿಸಬಹುದಾದ ನಮೂನೆಯಲ್ಲಿರಬೇಕು ಮತ್ತು ದೃಢೀಕರಣ ಪತ್ರ ಕೊಟ್ಟಾಗ ಸಾಲ ಕೊಡುವ ಸಂಸ್ಥೆಯು ರೈತನಿಂದ ಸ್ವೀಕೃತಿ ತೆಗೆದುಕೊಳ್ಳಬೇಕು.

10. **ಸಾಲ ಕೊಡುವ ಸಂಸ್ಥೆಗಳ ಬಾಧ್ಯತೆ**

10.1. ಈ ಯೋಜನೆಯ ಪ್ರಕಾರ ಅರ್ಹ ರೈತರ ಪಟ್ಟಿಗಳ ನಿಸ್ಪೃಹತೆ ಮತ್ತು ಪ್ರಾಮಾಣಿಕತೆ ಮತ್ತು ಪ್ರತಿಯೊಬ್ಬ ರೈತನ ಸಾಲ ಮನ್ನಾ ಅಥವಾ ಸಾಲ ಪರಿಹಾರದ ವಿವರಗಳಿಗಾಗಿ ಪ್ರತಿಯೊಂದು ಸಾಲ ಕೊಡುವ ಸಂಸ್ಥೆ ಹೊಣೆಯಾಗಿರಬೇಕು. ಈ ಯೋಜನೆಯ ಉದ್ದೇಶಗಳಿಗಾಗಿ ಸಾಲ ಕೊಡುವ ಸಂಸ್ಥೆ ಪಾಲಿಸಿದ ಪ್ರತಿಯೊಂದು ದಸ್ತಾವೇಜು, ಸಿದ್ಧಪಡಿಸಿದ ಪ್ರತಿಯೊಂದು ಪಟ್ಟಿ ಮತ್ತು ಕೊಟ್ಟ ಪ್ರತಿಯೊಂದು ದೃಢೀಕರಣ ಪತ್ರ ಸಾಲ ಕೊಡುವ ಸಂಸ್ಥೆಯ ಅಧಿಕೃತ ಅಧಿಕಾರಿಯ ಸಹಿ ಮತ್ತು ಹುದ್ದೆಯನ್ನು ಹೊಂದಿರಬೇಕು.

10.2. ಸಾಲ ಕೊಡುವ ಪ್ರತಿಯೊಂದು ಸಂಸ್ಥೆ (ಆ ರಾಜ್ಯದಲ್ಲಿನ ಶಾಖೆಗಳ ಸಂಖ್ಯೆಯನ್ನು ಪರಿಗಣಿಸಿ) ಪ್ರತಿಯೊಂದು ರಾಜ್ಯಕ್ಕಾಗಿ ಒಬ್ಬ ಅಥವಾ ಹೆಚ್ಚು ದೂರು ಪರಿಹಾರಕ ಅಧಿಕಾರಿಗಳನ್ನು ನೇಮಿಸಬೇಕು. ಸಾಲ ಕೊಡುವ ಸಂಸ್ಥೆಯು ಪ್ರತಿಯೊಂದು ಶಾಖೆಯಲ್ಲಿ ಸಂಬಂಧಿತ ದೂರು ಪರಿಹಾರಕ ಅಧಿಕಾರಿಯ ಹೆಸರು ಮತ್ತು ವಿಳಾಸವನ್ನು ಪ್ರದರ್ಶಿಸಬೇಕು. ಬಾಧಿತ ರೈತರಿಂದ ಅಹವಾಲುಗಳನ್ನು ಸ್ವೀಕರಿಸಲು ಮತ್ತು ಅವುಗಳ ಮೇಲೆ ಸೂಕ್ತ ಆದೇಶಗಳನ್ನು ಕೊಡಲು ದೂರು ಪರಿಹಾರಕ ಅಧಿಕಾರಿಗೆ ಅಧಿಕಾರವಿರಬೇಕು. ದೂರು ಪರಿಹಾರಕ ಅಧಿಕಾರಿಯ ಆದೇಶ ಅಂತಿಮವಾಗಿರುತ್ತದೆ.

10.3. 7.1ನೇ ಪ್ಯಾರಾದಲ್ಲಿ ಉಲ್ಲೇಖಿಸಿದ ಪಟ್ಟಿಗಳ ಪೈಕಿ ಒಂದರಲ್ಲಿ ತನ್ನ ಹೆಸರನ್ನು ಸೇರಿಸಿಲ್ಲವೆಂದು ಅಥವಾ ತನ್ನ ಹೆಸರನ್ನು ತಪ್ಪು ಪಟ್ಟಿಯಲ್ಲಿ ಸೇರಿಸಲಾಗಿದೆ ಎಂದು ಅಥವಾ ತನಗೆ ನೀಡಿದ ಪರಿಹಾರವನ್ನು ತಪ್ಪಾಗಿ ಲೆಕ್ಕಾಚಾರ ಮಾಡಲಾಗಿದೆ ಎಂದು ಅಸಮಾಧಾನ ಹೊಂದಿರುವ ಯಾವನೇ ರೈತ ಆತ ಸಾಲ ಪಡೆದ ಶಾಖೆಯ ಮೂಲಕ ಅಥವಾ ನೇರವಾಗಿ ಸಂಬಂಧಿತ ಸಾಲ ಕೊಡುವ ಸಂಸ್ಥೆಯ ದೂರು ಪರಿಹಾರಕ ಅಧಿಕಾರಿಗೆ ಅಹವಾಲು ಸಲ್ಲಿಸಬಹುದು ಮತ್ತು ಅಂತಹ ಪ್ರತಿಯೊಂದು ಅಹವಾಲನ್ನು ಅದನ್ನು ಸ್ವೀಕರಿಸಿದ 30 ದಿನಗಳೊಳಗೆ ವಿಲೇವಾರಿ ಮಾಡಬೇಕು.

11. ಲೆಕ್ಕ ಪರಿಶೋಧನೆ

ಈ ಯೋಜನೆಯ ಪ್ರಕಾರ ಸಾಲ ಮನ್ನಾ ಅಥವಾ ಸಾಲ ಪರಿಹಾರ ನೀಡಿರುವ ಪ್ರತಿಯೊಂದು ಸಾಲ ಕೊಡುವ ಸಂಸ್ಥೆಯು (ಶಾಖೆಗಳಲ್ಲಿನ ಲೆಕ್ಕಪತ್ರ ಪುಸ್ತಕಗಳನ್ನು ಒಳಗೊಂಡು) ಲೆಕ್ಕಪತ್ರ ಪುಸ್ತಕಗಳು ಆರ್.ಬಿ.ಐ./ನಬಾರ್ಡ್ ಗೊತ್ತುಪಡಿಸಬಹುದಾದ ವಿಧಾನದ ಅನುಸಾರ ಲೆಕ್ಕ ಪರಿಶೋಧನೆಗೆ ಒಳಪಡಬೇಕು. ಆರ್.ಬಿ.ಐ./ನಬಾರ್ಡ್ ನಿರ್ದೇಶಿಸಬಹುದಾದಂತೆ ಸಹಮತ ಲೆಕ್ಕ ಪರಿಶೋಧಕರು, ಶಾಸನಬದ್ಧ ಲೆಕ್ಕ ಪರಿಶೋಧಕರು ಅಥವಾ ವಿಶೇಷ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆ ನಡೆಸಬಹುದು. ಹಾಗೆ ಮಾಡಬೇಕಿದೆ ಎಂದು ಕೇಂದ್ರ ಸರ್ಕಾರಕ್ಕೆ ಅವಶ್ಯಕವೆನಿಸಿದಲ್ಲಿ, ಅಂತಹ ಸಾಲ ಕೊಡುವ ಸಂಸ್ಥೆಯ ಒಂದು ಅಥವಾ ಹೆಚ್ಚು ಶಾಖೆಗಳ ವಿಶೇಷ ಲೆಕ್ಕ ಪರಿಶೋಧನೆಗೆ ನಿರ್ದೇಶಿಸಬಹುದು.

12. ಪ್ರಚಾರ

12.1. ಈ ಯೋಜನೆಯ ಒಂದು ಪ್ರತಿಯನ್ನು ಇಂಗ್ಲೀಷಿನಲ್ಲಿ ಮತ್ತು ರಾಜ್ಯದ/ಕೇಂದ್ರ ಪ್ರದೇಶದ ಅಧಿಕೃತ ಭಾಷೆ ಅಥವಾ ಭಾಷೆಗಳಲ್ಲಿ ಈ ಯೋಜನೆಯ ವ್ಯಾಪ್ತಿಗೆ ಒಳಪಡುವ ಪ್ರತಿಯೊಂದು ಸಾಲ ಕೊಡುವ ಸಂಸ್ಥೆಯ ಪ್ರತಿಯೊಂದು ಶಾಖೆಯಲ್ಲಿ ಪ್ರದರ್ಶಿಸಬೇಕು.

12.2. ಈ ಯೋಜನೆಯ ಒಂದು ಪ್ರತಿ ವಿತ್ತ ಸಚಿವಾಲಯ, ವಿತ್ತೀಯ ಸೇವೆಗಳ ಇಲಾಖೆ, ಭಾರತ ಸರ್ಕಾರ, ಆರ್.ಬಿ.ಐ. ಮತ್ತು ನಬಾರ್ಡ್‌ನ ವೆಬ್‌ಸೈಟುಗಳಲ್ಲಿ ಲಭ್ಯವಿರುತ್ತದೆ.

13. ಪ್ರತಿಪಾದನೆ ಮತ್ತು ಕಷ್ಟಗಳನ್ನು ನಿವಾರಿಸಲು ಅಧಿಕಾರ

13.1. ಈ ಯೋಜನೆಯ ಯಾವುದೇ ನಿಯಮಗಳ ಅಥವಾ ಆ ಪ್ರಕಾರ ಹೊರಡಿಸಿದ ಯಾವುದೇ ತಿಳುವಳಿಕೆಗಳ ಪ್ರತಿಪಾದನೆ ಕುರಿತು ಯಾವುದೇ ಸಂಶಯ ಉದ್ಭವಿಸಿದರೆ, ಕೇಂದ್ರ ಸರ್ಕಾರ ಸಂಶಯವನ್ನು ಬಗೆಹರಿಸಬೇಕು ಮತ್ತು ಕೇಂದ್ರ ಸರ್ಕಾರದ ತೀರ್ಮಾನ ಅಂತಿಮವಾಗಿರುತ್ತದೆ.

13.2. ಯೋಜನೆಯ ಯಾವುದೇ ಭಾಗಗಳನ್ನು ಅಥವಾ ಆ ಪ್ರಕಾರ ಹೊರಡಿಸಿದ ಯಾವುದೇ ತಿಳುವಳಿಕೆಗಳನ್ನು ಜಾರಿಗೊಳಿಸುವುದರಲ್ಲಿ ಯಾವುದೇ ಕಷ್ಟ ಉದ್ಭವಿಸಿದಲ್ಲಿ, ಕೇಂದ್ರ ಸರ್ಕಾರ ಕಷ್ಟ ನಿವಾರಿಸುವ ಉದ್ದೇಶಗಳಿಗಾಗಿ ಅವಶ್ಯ ಅಥವಾ ಅತ್ಯಗತ್ಯವೆಂದು ಅದಕ್ಕೆ ತೋರುವ ಏನನ್ನಾದರೂ ಆದೇಶಿಸಬಹುದು.

14. ಉಸ್ತುವಾರಿ

ಯೋಜನೆಯ ಅನುಷ್ಠಾನದ ಉಸ್ತುವಾರಿ ಮಾಡಲು

i) ಕಾರ್ಯದರ್ಶಿ, ವಿತ್ತೀಯ ಸೇವೆಗಳ ಇಲಾಖೆ, ವಿತ್ತ ಸಚಿವಾಲಯ – ಅಧ್ಯಕ್ಷರು
ii) ಕಾರ್ಯದರ್ಶಿ, ಕೃಷಿ ಮತ್ತು ಸಹಕಾರ ಇಲಾಖೆ, ಕೃಷಿ ಸಚಿವಾಲಯ
iii) ಉಪ ಗವರ್ನರ್, ಭಾರತೀಯ ರಿಜರ್ವ್ ಬ್ಯಾಂಕ್;
iv) ಅಧ್ಯಕ್ಷರು, ನಬಾರ್ಡ್;
v) ಎರಡು ಸಾರ್ವಜನಿಕ ರಂಗದ ಬ್ಯಾಂಕುಗಳ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು;
vi) ಎರಡು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಅಧ್ಯಕ್ಷರು; ಮತ್ತು
vii) ಎರಡು ರಾಜ್ಯ ಮಟ್ಟದ ಸಹಕಾರಿ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳನ್ನು

ಒಳಗೊಂಡ ರಾಷ್ಟ್ರೀಯ ಮಟ್ಟದ ಉಸ್ತುವಾರಿ ಸಮಿತಿಯನ್ನು ರಚಿಸಬೇಕು.

**ಅನುಸೂಚಿ 1**
**ಡಿಪಿಎಪಿ, ಡಿಡಿಪಿ ಪ್ರದೇಶಗಳು ಮತ್ತು ಪ್ರಧಾನ ಮಂತ್ರಿಗಳ ವಿಶೇಷ ಪರಿಹಾರ ಪ್ಯಾಕೇಜ್‌ಗೆ ಒಳಪಡುವ ಕಂದಾಯ ಜಿಲ್ಲೆಗಳು.**

ರಾಜ್ಯ: ಕರ್ನಾಟಕ

1. ಬೆಂಗಳೂರು ಗ್ರಾಮಾಂತರ
2. ಬೆಳಗಾಂ
3. ಬೀದರ್
4. ಚಾಮರಾಜನಗರ
5. ಚಿಕ್ಕಮಗಳೂರು
6. ಚಿತ್ರದುರ್ಗ
7. ದಾವಣಗೆರೆ
8. ಧಾರವಾಡ
9. ಗದಗ
10. ಗುಲ್ಬರ್ಗ
11. ಹಾಸನ
12. ಹಾವೇರಿ
13. ಕೋಲಾರ
14. ಮೈಸೂರು
15. ತುಮಕೂರು
16. ಕೊಡಗು
17. ಶಿವಮೊಗ್ಗ
18. ಬಾಗಲಕೋಟೆ
19. ಬಳ್ಳಾರಿ
20. ಬಿಜಾಪುರ
21. ಕೊಪ್ಪಳ
22. ರಾಯಚೂರು